# UASB LIBRARY
## Newspaper Clippings

Pg .1 Friday 30-07-2021 **Jai Kisan**





12,619 ಹೆಕ್ಟೇರ್ ಬೆಳೆ ನಾಶ | ಪ್ರವಾಹದಿಂದ ನಲುಗಿದ ರೈತ

# ಮುಂಗಾರು ಬೆಳೆ ನುಂಗಿದ ವರುಣ

◆ ರಾಚಪ್ಪಾ ಜಂಬಗಿ

**ಕಲಬುರಗಿ:** ಎರಡು ವರ್ಷದಿಂದ ಬರದನಾಡು ಕಲಬುರಗಿ ಜಿಲ್ಲೆಯಲ್ಲಿ ಉತ್ತಮವಾಗಿ ಮಳೆಯಾಗಿ ರೈತರು ಮಂದಹಾಸ ಬೀರಿರುವುದೇನೋ ನಿಜ, ಆದರೆ ಈಗ ಅನ್ನದಾತನ ಮುಖ ಕಳೆಗುಂದಿದೆ. ಕಳೆದ 15 ದಿನಗಳಿಂದ ಸುರಿದ ಮುಂಗಾರು ಮಳೆಯಿಂದಾಗಿ ಜಿಲ್ಲೆಯಲ್ಲಿ 6,008 ಹೆಕ್ಟೇರ್ ತೊಗರಿ ಬೆಳೆ, 4,667 ಹೆಕ್ಟೇರ್ ಹೆಸರು ಕಾಳು ಬೆಳೆ ಹಾಳಾಗಿವೆ. ಜುಲೈ 22ರವರೆಗೆ ಜಿಲ್ಲೆಯಲ್ಲಿ ಒಟ್ಟು 12,619 ಸಾವಿರ ಹೆಕ್ಟೇರ್ ಬೆಳೆ ಹಾನಿಗೀಡಾಗಿದೆ ಎಂದು ಕೃಷಿ ಇಲಾಖೆ ವರದಿ ಮಾಡಿದೆ.

**ತಾಲೂಕುವಾರು ಬೆಳೆ ಹಾನಿ ವಿವರ:** ಚಿಂಚೋಳಿ- ತೊಗರಿ 1,246 ಹೆಕ್ಟೇರ್, ಹೆಸರುಕಾಳು- 382, ಉದ್ದು-258 ಹೆಕ್ಟೇರ್. ಸೇಡಂ- ತೊಗರಿ 3,615 ಹೆಕ್ಟೇರ್, ಹೆಸರುಕಾಳು- 980 ಹೆಕ್ಟೇರ್, ಉದ್ದು- 425 ಹೆಕ್ಟೇರ್, ಚಿತ್ತಾಪುರ- ತೊಗರಿ 325 ಹೆಕ್ಟೇರ್, ಹೆಸರುಕಾಳು 3,040 ಹೆಕ್ಟೇರ್.

➘ ೨

**“ 3 ಎಕರೆ ಜಮೀನಿನಲ್ಲಿ ಹೆಸರು ಬಿತ್ತನೆ ಮಾಡಲಾಗಿದ್ದು, ಎರಡು ಎಕರೆ ಹೆಸರು ನೀರಿನಲ್ಲಿ ಕೊಚ್ಚಿ ಹೋಗಿದೆ. ಪರಿಹಾರ ನೀಡಬೇಕು.**

■ **ಶರಣು ಪಾಟೀಲ್,** ಡಬರಾಬಾದ ರೈತ



ದಿಗಂತ ವಿಶೇಷ

### ಶೇ.92 ಹೆಚ್ಚು ಮಳೆ

ಜಿಲ್ಲೆಯಲ್ಲಿ ಜು.1ರಿಂದ 26ವರೆಗೆ 113.4 ಮಿ.ಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ ಈ ಸಲ 217.2 ಮಿ.ಮೀ ಮಳೆ ಸುರಿದಿದೆ. ಶೇ,92 ಹೆಚ್ಚುವರಿ ಮಳೆ ಬಂದಿದೆ. ಕಳೆದ ವರ್ಷ ಜುಲೈ, ಆಗಸ್ಟ್ ತಿಂಗಳಲ್ಲಿ ಭೀಕರ ಮಳೆ ಸುರಿದ ಪರಿಣಾಮ ಅನಾಹುತ ಉಂಟಾಗಿತ್ತು. ಈ ಬಾರಿ ಚಿಂಚೋಳಿ, ಕಾಳಗಿ ತಾಲೂಕಿನಲ್ಲಿ ವರುಣ ತನ್ನ ರೌದ್ರನರ್ತನ ತೋರಿಸಿದ್ದಾನೆ. ಕಳೆದ ವರ್ಷದ ನೆರೆ ಸಂತ್ರಸ್ತರಿಗೆ ಎರಡನೇ ಹಂತದ ಪರಿಹಾರ, ಬೆಳೆ ಪರಿಹಾರ ಇನ್ನೂ ಸಿಕ್ಕಿಲ್ಲ. ತ್ವರಿತವಾಗಿ ಜಂಟಿ ಸಮೀಕ್ಷೆ ನಡೆಸಿ ಬೆಳೆ ಪರಿಹಾರ ವಿತರಿಸುವಂತೆ ರೈತರು ಆಗ್ರಹಿಸಿದ್ದಾರೆ.

**30-07-2021 Hd Pg 01**


For more information visit
University Library Website
Web - uasbagrilibindia.org
E-mail- librarian@uasbangalore.edu.in